ಈ ದಿನ ದಿನಾಂಕಃ 04.08.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಡಿ ಎಸ್ ವಕೀಲರಿಂದಃ</u>**

ಸರ್ವೆ ನಂ. 53/9ರ ಆಸ್ತಿಗೆ ದಾವೆಯನ್ನು ಸಲ್ಲಿಸಿರುತ್ತೇನೆ. ಸರ್ವೆ ನಂ. 53 ರ ಒಟ್ಟು ಆಸ್ತಿಯನ್ನು ನಾನು ನೋಡಿರುತ್ತೇನೆ. ಸರ್ವೆ ನಂ. 53 ರ ಒಟ್ಟು ಆಸ್ತಿ ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 53 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ. 53 ರಲ್ಲಿ ಸರ್ವೆ ನಂ. 53/9 ರವರೆಗೆ ಪೋಡುಗಳಾಗಿ ಎಲ್ಲರೂ ಸಾಗು ಮಾಡುತ್ತಿದ್ದಾರೆ. ಸರ್ವೆ ನಂ. 53 ರಲ್ಲಾದ ಪೋಡುಗಳ ವಿಸ್ತೀರ್ಣ ಹಾಗೂ ಮಾಲೀಕರ ವಿವರ ನನಗೆ ಗೊತ್ತಿಲ್ಲ. ಸರ್ವೆ ನಂ. 53 ರಲ್ಲಿ ಆದ ಪೋಡುಗಳ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ ಸಾಕ್ಷಿ ಮುಂದುವರೆದು ನನ್ನ ಪಕ್ಕದ ಜಮಿನಿನ ಚೆಕ್ಕುಬಂದಿಯನ್ನು ಹೇಳಬಹುದೆಂದು ನುಡಿಯುತ್ತಾರೆ.

2. ದಾವೆಯನ್ನು ಪ್ರತಿವಾದಿಗಳ ವಿರುದ್ದ ಒತ್ತುವರಿಯಾದ 15 ಗುಂಟೆ ಜಮೀನನ್ನು ಬಿಟ್ಟುಕೊಂಡುವಂತೆ ಪ್ರಾರ್ಥಿಸಿ ದಾವೆ ಸಲ್ಲಿಸಿರುತ್ತೇನೆ. ಸರ್ವೆ ಇಲಾಖೆಯಿಂದ ಜಮೀನನ್ನು ಸರ್ವೆ ಮಾಡಿದಾಗ ಒತ್ತುವರಿಯಾದ ವಿಚಾರ ತಿಳಿದು ಬಂದಿರುತ್ತದೆ. ದಿಃ 03.01.2020 ರಂದು ನನ್ನ ತಂದೆಯಿಂದ ಒಟ್ಟು ಕುಟುಂಬದ ಆಸ್ತಿಯಿಂದ ದಾವಾಸ್ವತ್ತು ನನ್ನ ಪಾಲಿಗೆ ಬಂದಿರುತ್ತದೆ. ವಿಭಾಗ ಪತ್ರದ ಮೂಲಕ ನನ್ನ ಹಿಸ್ಸೆಗೆ ಬಂದ ಆಸ್ತಿಯ ಸರ್ವೆ ನಂ. 53/9ರ ಚೆಕ್ಕುಬಂದಿ ಪೂರ್ವಕ್ಕೆ ಲಲಿತಮ್ಮ, ಪುಷ್ಪಮ್ಮನವರ ಜಮೀನು, ಪಶ್ಚಿಮಕ್ಕೆ ಈರಾನಾಯ್ಕರವರ ಜಮೀನು, ಉತ್ತರಕ್ಕೆ ಸರ್ವೆ ನಂ. 51/1ಬಿ ಜಮೀನು, ದಕ್ಷಿಣಕ್ಕೆ ಸರ್ವೆ ನಂ. 8/1ಬಿ ಯ ಜಮೀನು ಇರುತ್ತದೆ.

3. ವಾದ ಪತ್ರದ ದಾವಾ ಷೆಡ್ಯೂಲ್ ನಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ಉಳಿದ ಇದೆ ಸರ್ವೆ ನಂಬರ್ ನ ಜಮೀನು ಬಿಟ್ಟುಕೊಡುವಂತೆ ಹಾಕಿರುತ್ತೇನೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸರ್ವೆ ನಂ. 53/8 ರಲ್ಲಿ ಸುಮಾರು 70ವರ್ಷಗಳಿಂದ ಸ್ವಾಧಿನದಲ್ಲಿದ್ದಾರೆಂದರೆ ಸರಿ. ಸಾಕ್ಷಿ ಮುಂದುವರೆದು ಒತ್ತುವರಿ ಇತ್ತೀಚೆಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 53/8 ರ ಆಸ್ತಿಯ ವಿಸ್ತೀರ್ಣ 1 ಎಕರೆ 38 ಗುಂಟೆ

ಎಂದರೆ ಸರಿ. ಸರ್ವೆ ನಂ. 53/1 ರ ಜಮೀನು ಪ್ರತಿವಾದಿಗೆ ಸಂಬಂದಿಸಿದ ಆಸ್ತಿ ಎಂದರೆ ಸರಿ.

4. ನಾನು ನಿವೃತ್ತ ಸರ್ಕಾರಿ ಅಧಿಕಾರಿ ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿಯ ಸಾಗು ಮಾಡುತ್ತಿದ್ದರು. ಸಾಮಾನ್ಯವಾಗಿ ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ಆಸ್ತಿಯನ್ನು ಸರ್ವೆ ಮಾಡಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗ ಮಾಡುವ ಕಾಲಕ್ಕೆ ಮಾಡಿಸಿದ ಸರ್ವೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ವಿಬಾಗ ಮಾಡುವ ಕಾಲಕ್ಕೆ ಅಳತೆ ಮಾಡಿಸಿರುವುದಿಲ್ಲ ವಿಭಾಗ ಆದ ನಂತರ ಅಳತೆಯನ್ನು ಮಾಡಿಸಿರುತ್ತೇವೆಂದು ನುಡಿಯುತ್ತಾರೆ. ಹಾಗಾಗಿ ವಿಭಾಗ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ಯಾವ ದಾಖಲೆಯ ಆದಾರದ ಮೇರೆಗೆ ನಮೂದಿಸಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಬಳಿ ಇದ್ದ ದಾಖಲೆಗಳ ಪ್ರಕಾರ ನಮೂದಿಸಿರುತ್ತಾರೆಂದು ನುಡಿಯುತ್ತಾರೆ. ವಿಭಾಗ ಪತ್ರವನ್ನು ನನ್ನ ತಂದೆ ಪಹಣಿ ಆಧಾರದ ಮೇರೆಗೆ ಮಾಡಿಸಿರುತ್ತಾರೆ.

5. ಸರ್ವೆ ನಂ. 53 ರ ಒಟ್ಟು ಆಸ್ತಿಗಳು ಪೋಡು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 53 ರಲ್ಲಿ ಆದ ಪೋಡುಗಳ ನೋಟಿಸ್ ನ್ನು ನನಗೆ ನಿಡೀರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುರೆದು ಸರ್ವೆ ನಂ. 53 ಸುಮಾರು 1 ಕಿ ಮೀನಷ್ಟು ವಿಸ್ತೀರ್ಣವುಳ್ಳದಾಗಿದ್ದು ನಾನು ಹದ್ದುಬಸ್ತ್ ಗೆ ಹಾಕಿದಾಗ ನೋಟಿಸನ್ನು ಜಾರಿ ಮಾಡಿರುತ್ತಾರೆಂದು ನುಡಿಯುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.